### ಮುನ್ನೆಚ್ಚರಿಕೆ ಕ್ರಮಗಳು

- ಮಕ್ಕಳಿಂದ ದೂರವಿಡಿ, ಬಿಸಿಲಿಗೆ ಒಡ್ಡಬೇಡಿ ತಂಪಾದ ಮತ್ತು ಕತ್ತಲು ಸ್ಥಳದಲ್ಲಿ ಸಂಗ್ರಹಿಸಿ ಕಣ್ಣುಗಳ ಸಂಪರ್ಕಕ್ಕೆ ಬಂದಲ್ಲಿ ಕೂಡಲೇ ಶುದ್ಧವಾದ ನೀರಿನಿಂದ ತೊಳೆದು ವೈದ್ಯರನ್ನು ಬೇಟಿ ಮಾಡಿ
- ಡಾ. ಸಾಯಿಲ್ ದ್ರಾವಣವನ್ನು ತಯಾರಿಸಲು ಈ ಮೊದಲು ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಅಥವಾ ಶಿಲೀಂದ್ರನಾಶಕಗಳು ಇವುಗಳನ್ನು ಬಳಸಲು ಉಪಯೋಗಿಸಿದ ಉಪಕರಣಗಳು ಅಥವಾ ಪಾತ್ರೆಗಳನ್ನು ಬಳಸಬೇಡಿ



- ಡಾ. ಸಾಯಿಲ್ ಬಳಕೆಯಿಂದ ಆದ ಪ್ರಯೋಜನಗಳು:
- ಮಣ್ಣಿನ ಫಲವತ್ತತೆಯಲ್ಲಿ ಹೆಚ್ಚಳ
- ಸೊಪ್ಪಿನ ವಾರ್ಷಿಕ ಇಳುವರಿಯಲ್ಲಿ ಹೆಚ್ಚಳ (22497 ಕೆ.ಜಿ/ಹೆಕ್ಟೇರ್)
- ಸಾವಯುವ ಇಂಗಾಲದ ಹೆಚ್ಚಳ (0.74%)
- ಸೂಕ್ಷ್ಮಾಣು ಜೀವಿಯ ಇಂಗಾಲ ಪ್ರಮಾಣದ ಹೆಚ್ಚಳ (28%) ರೇಷ್ಮೆ ಗೂಡಿನ ಉತ್ಪಾದಕತೆ0ಯಲ್ಲಿ ಹೆಚ್ಚಳ (70






ಪತ್ರ್ಯ
ವಿ. ಗುಣಶೇಖರ್, ಎಮ್. ಮುನಿರತ್ನಮ್ ರೆಡ್ಡಿ,
ಕೆ. ಶ್ರೀಕಂಠಸ್ವಾಮಿ ಮತ್ತು ವಿ. ಶಿವಪ್ರಸಾದ್
(ಕನ್ನಡ ಅನುವಾದ: ಜೆ.ಬಿ. ನರೇಂದ್ರ ಕುಮಾರ್)



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ನಿರ್ದೇಶಕರು
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ISO 9001: 2015 ಪ್ರಮಾಣೀಕೃತ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು - 570008
ಫೋನ್: 0821-2362757, 2362406
ಫ್ಯಾಕ್ಸ್ : 0821-2362845 www.csrtimys.res.in
email: cstrimys.csb@nic.in



Copies: 1000 January 2017 Design & Layout: J. Justin Kumar



Technical Bulletin No.27 [Kannada]


# Dr. Soil

## ಸಾವಯವ ಸಸ್ಯ ಆಹಾರ

## ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಗೆ, ಮಣ್ಣಿನ ಫಲವತ್ತತೆ ಮತ್ತು ಆರೋಗ್ಯ ಹೆಚ್ಚಿಸಲು ಒಂದು ಜೈವಿಕ ಪ್ರಚೋದಕ





**ಸಂಯುಕ್ತವಾಗಿ ಅಭಿವೃದ್ಧಿ ಪಡಿಸಿದವರು**
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ISO 9001: 2015 ಪ್ರಮಾಣೀಕೃತ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು
ಮತ್ತು
**ಮೈಕ್ರೋಬಿ ಆಗ್ರೋಟೆಕ್ ಪ್ರೈ. ಲಿ., ಬೆಂಗಳೂರು**

# Dr. Soil

## ಸಾವಯವ ಸಸ್ಯ ಆಹಾರ

### ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಗೆ, ಮಣ್ಣಿನ ಫಲವತ್ತತೆ ಮತ್ತು ಆರೋಗ್ಯ ಹೆಚ್ಚಿಸಲು ಒಂದು ಜೈವಿಕ ಪ್ರಚೋದಕ

ಹಿಪ್ಪುನೇರಳೆಯು ರೇಷ್ಮೆ ಹುಳುವಿನ ಏಕೈಕ ಆಹಾರ ಸಸ್ಯವಾಗಿದ್ದು ಅದನ್ನು ಪ್ರಮುಖವಾಗಿ ಸೊಪ್ಪಿನ ಉತ್ಪಾದನೆಗಾಗಿ ಬೆಳೆಯಲಾಗುತ್ತಿದೆ. ಸೊಪ್ಪಿನ ಹೆಚ್ಚಿನ ಇಳುವರಿ ಹಾಗೂ ಗುಣಮಟ್ಟದಲ್ಲಿ ಸುಧಾರಣೆ, ರೇಷ್ಮೆ ಗೂಡಿನ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮುಖ್ಯವಾದ ಹಂತಗಳಾಗಿವೆ. ಹಿಪ್ಪುನೇರಳೆಯ ಇಳುವರಿ ಮತ್ತು ಗುಣಮಟ್ಟದಲ್ಲಿನ ಸುಧಾರಣೆಗಾಗಿ ರಸಗೊಬ್ಬರ ಮತ್ತು ಪೋಷಕಾಂಶಗಳನ್ನು ಮಣ್ಣಿಗೆ ಸೇರಿಸಬೇಕಾಗುತ್ತದೆ.

ಅಧಿಕ ಇಳುವರಿ ಕೊಡುವ ಹಿಪ್ಪುನೇರಳೆ ತಳಿಗಳನ್ನು ಹೆಚ್ಚಿನ ಮಟ್ಟದಲ್ಲಿ ಬೆಳೆದು ರಸಗೊಬ್ಬರಗಳನ್ನು ವರ್ಷದಿಂದ ವರ್ಷಕ್ಕೆ ಅಸಮತೋಲನವಾಗಿ ನೀಡುವುದರಿಂದ ಮಣ್ಣಿನ ಗುಣಮಟ್ಟದ ಮೇಲೆ ಪರಿಣಾಮ ಬೀರುವುದಲ್ಲದೆ ವಾತಾವರಣದ ಮಲಿನತೆ ಹಾಗು ಹವಾಮಾನದಲ್ಲಿ ಏರುಪೇರುಂಟಾಗುತ್ತದೆ. ಅಲ್ಲದೆ ಹಿಪ್ಪುನೇರಳೆಯಲ್ಲಿ ವರ್ಷಕ್ಕೆ ಹಲವು ಬಾರಿ ಸೊಪ್ಪಿನ ಕೊಯಿಲು ಮಾಡುವುದರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳು ಬರಿದಾಗುತ್ತವೆ, ಇದು ನಂತರದ ಸೊಪ್ಪಿನ ಹಾಗೂ ರೇಷ್ಮೆ ಗೂಡಿನ ಇಳುವರಿ ಮೇಲೆ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಸೊಪ್ಪಿನ ಉತ್ಪಾದನೆಯಲ್ಲಿ ಸ್ಥಿರತೆ ಹಾಗೂ ಮಣ್ಣಿನ ಫಲವತ್ತತೆಯನ್ನು ನಿರ್ವಹಿಸಲು ಸತೋಲಿತ ಗೊಬ್ಬರಗಳಿಂದ ಪೋಷಕಾಂಶಗಳ ಮರುಪೂರಣದ ಅವಶ್ಯಕತೆ ಇದೆ



ಕಡಿಮೆ ಹಾಗೂ ಅಕಾಲಿಕ ಮಳೆ, ಕುಗ್ಗುತ್ತಿರುವ ಅಂತರ್ಜಲ ಮಟ್ಟ, ಮಣ್ಣು ಮತ್ತು ನೀರಿನ ಸಂರಕ್ಷಣಾ ಪದ್ಧತಿಗಳ ಅನುಸರಣೆ ಇಲ್ಲದಿರುವುದು ಹಿಪ್ಪುನೇರಳೆ ಉತ್ಪಾದಕತೆಯು ಕಡಿಮೆಯಾಗಲು ಪ್ರಮುಖ ಕಾರಣಗಳಾಗಿವೆ. ಕಡಿಮೆ ಮಳೆ ಹಾಗೂ ಅಧಿಕ ಉಷ್ಣತೆಯಿಂದಾಗಿ ಇಂಗಾಲ ಮತ್ತು ಸಾರಜನಕದ ನಷ್ಟ ಉಂಟಾಗುತ್ತಿರುವುದು ಕಂಡುಬಂದಿದೆ. ಈ ನಿರ್ಬಂಧಗಳಿಂದಾಗಿ ಕಡಿಮೆ ತೇವಾಂಶದ ಪ್ರದೇಶಗಳಲ್ಲಿ ಪರಿಸರ ಸ್ನೇಹಿ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಹಿಪ್ಪುನೇರಳೆ ಸೊಪ್ಪಿನ ಉತ್ಪಾದಕತೆಯನ್ನು ಹೆಚ್ಚಿಸುವ ದಿಸೆಯತ್ತ ಗಮನ ಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ದ್ರವ ರೂಪದ ಸಾವಯವ ಗೊಬ್ಬರದ ಪೂರೈಕೆಯಿಂದ ಹಿಪ್ಪುನೇರಳೆ ಉತ್ಪಾದಕತೆಯನ್ನು ಉತ್ತಮಗೊಳಿಸುವುದು ಒಂದು ಮಾರ್ಗವೆಂದು ಕಂಡುಕೊಳ್ಳಲಾಗಿದೆ.

ಡಾ. ಸಾಯಿಲ್ ಲಘು ಮತ್ತು ಸೂಕ್ಷ್ಮ ಜೀವಿಗಳುಳ್ಳ ಒಂದು ದ್ರವ ರೂಪದ ಸಾವಯವ ಗೊಬ್ಬರ. ಇದಕ್ಕೆ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಯ ಜೊತೆಗೆ ಮಣ್ಣಿನ ಫಲವತ್ತತೆ ಹಾಗೂ ಮಣ್ಣಿನ ಆರೋಗ್ಯ ಸುಧಾರಣೆ ಮಾಡುವ ಸಾಮರ್ಥ್ಯ ಇದೆ. ಇದು ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಹಾಗೂ ಸುಧಾರಿತ ರೇಷ್ಮೆ ಉತ್ಪಾದನೆಗಾಗಿ ಶಿಫಾರಸ್ಸು ಮಾಡಿರುವ ಒಂದು ಬೇಸಾಯದ ಪ್ರಮುಖ ಸಾಧನವಾಗಿದೆ.



### ಉಪಯೋಗಿಸುವ ವಿಧಾನ

ಒಂದು ಎಕರೆ ಹಿಪ್ಪುನೇರಳೆ ತೋಟಕ್ಕೆ ವಾರ್ಷಿಕವಾಗಿ 15 ಮೆ.ಟನ್ ಕೊಟ್ಟಿಗೆ ಗೊಬ್ಬರವನ್ನು ಎರಡು ಕಂತುಗಳಲ್ಲಿ ಹಾಕಿ ನಂತರ ಡಾ ಸಾಯಿಲ್ ದ್ರವರೂಪದ ಗೊಬ್ಬರವನ್ನು ಮೊದಲ ಬೆಳೆಗೆ 25 ಲೀಟರ್, ಎರಡನೇ ಮತ್ತು ಮೂರನೇ ಬೆಳೆಗಳಿಗೆ ತಲಾ 10 ಲೀಟರ್‌ನಂತೆ ಉಪಯೋಗಿಸಿ 4ನೇ ಬೆಳೆಯ ನಂತರದಿಂದ 5 ಲೀಟರ್ ಸಾಕು

ಡಾ. ಸಾಯಿಲ್‌ನ್ನು ಹನಿ ನೀರಾವರಿಯ ಮೂಲಕ ನೀಡಬೇಕು ಅಥವಾ ಕಾಲುವೆ ನೀರಾವರಿ ಮಾಡುವ ಪಕ್ಷದಲ್ಲಿ 200 ಲೀಟರ್ ನೀರಿನ ಜೊತೆ ಮೇಲೆ ತಿಳಿಸಿರುವ ಪ್ರಮಾಣದ ಡಾ. ಸಾಯಿಲ್ ಗೊಬ್ಬರವನ್ನು ಮಿಶ್ರಣ ಮಾಡಿ ಆ ನೀರನ್ನು ತೋಟಕ್ಕೆ ಹಾಯಿಸಿ

### ಉಪಯೋಗಗಳು

ಪೋಷಕಾಂಶಗಳನ್ನು ತಡೆದು ಇಟ್ಟುಕೊಳ್ಳುತ್ತದೆ ಮತ್ತು ಮಣ್ಣಿನ ರಸಸಾರವನ್ನು ಸ್ಥಿರಗೊಳಿಸುತ್ತದೆ.

ಮಣ್ಣಿನಲ್ಲಿ ಸಾವಯ ಇಂಗಾಲ, ಸಾವಯವ ವಸ್ತು, ಲಭ್ಯವಿರುವ ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಸೂಕ್ಷ್ಮ ಪೋಷಕಾಂಶಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ.

ಸೂಕ್ಷ್ಮ ಜೀವಿಗಳು ವಿವಿಧ ಅನುಕೂಲಕರ ಕಾರ್ಯಗಳನ್ನು ನಿರ್ವಹಿಸುವಾಗ ಡಾ. ಸಾಯಿಲ್ ಒಂದು ಶಕ್ತಿಯ ಮೂಲವಾಗಿ ಸಹಾಯ ಮಾಡುತ್ತದೆ.

ಮಣ್ಣಿನಲ್ಲಿರುವ ಕೆಲವು ಖನಿಜಾಂಶಗಳನ್ನು ಕರಗಿಸಿ ಅವು ಸಸ್ಯಗಳಿಗೆ ದೊರೆಯುವಂತೆ ಮಾಡುತ್ತದೆ.

ಕೆಲವೊಂದು ಲೋಹಗಳನ್ನು ಹೀರಲು ಅನುವು ಮಾಡಿಕೊಟ್ಟು ಹಿಪ್ಪುನೇರಳೆ ಸೊಪ್ಪಿನ ಗುಣಮಟ್ಟ ಮತ್ತು ಇಳುವರಿಯನ್ನು ಸುಧಾರಿಸುತ್ತದೆ.

ರೇಷ್ಮೆ ಹುಳುಗಳ ಗುಣಲಕ್ಷಣಗಳನ್ನು ಸುಧಾರಿಸುತ್ತದೆ

ರಾಸಾಯನಿಕ ಗೊಬ್ಬರದ ಅವಶ್ಯಕತೆ ಕಡಿಮೆಯಾಗುವುದರಿಂದ ಬೇಸಾಯದ ಖರ್ಚು ಕಡಿಮೆಯಾಗುತ್ತದೆ ಹಾಗೂ ಪರಿಸರ ರಕ್ಷಣೆಗೆ ಸಹಕಾರಿಯಾಗುತ್ತದೆ.